International Journal of Kannada Research 2017; 3(2): 07-09




International Journal of Kannada Research
www.kannadajournal.com

ISSN: 2454–5813
IJSR 2017; 3(2): 07-09
© 2017 IJKS
www.kannadajournal.com
Received: 02-02-2017
Accepted: 03-03-2017

**ಆಶಾ ಎಂ.ಎಚ್**
ಸಂಶೋಧನಾರ್ಥಿ
ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ

**Correspondence**
**ಆಶಾ ಎಂ.ಎಚ್**
ಸಂಶೋಧನಾರ್ಥಿ
ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ

# ಮೌಖಿಕ ಆಕರಗಳಾದ ಜನಪದ ಮಹಿಳಾ ಕಥನ ಕಾವ್ಯಗಳು

**ಆಶಾ ಎಂ.ಎಚ್**

ಪ್ರಾಚೀನ ಕಾಲದಲ್ಲಿ ಮನುಷ್ಯನ ಬದುಕು ಸೀಮಿತವಾಗಿತ್ತು, ವೇಗರಹಿತವಾಗಿತ್ತು, ಪ್ರಕೃತಿಗೆ ಸಮೀಪವಾಗಿತ್ತು, ಕುತೂಹಲಭರಿತವಾಗಿತ್ತು. ಅವರ ಅಭಿವ್ಯಕ್ತಿಯ ಅಂಶಗಳು ಮೌಖಿಕವಾಗಿದ್ದವು, ಮನುಷ್ಯ ಸೃಷ್ಟಿಯ ಎಷ್ಟೋ ವರ್ಷಗಳ ಮೇಲೆ ಭಾಷೆಯನ್ನು ಅಳವಡಿಸಿಕೊಂಡರೂ ಬರವಣಿಗೆಯ ಅದ್ಭುತ ಸಿದ್ಧಿಸಿರಲಿಲ್ಲವಾದ್ದರಿಂದ, ಅನುಭವಗಳನ್ನು ಪರಸ್ಪರರಲ್ಲಿ ಹರಡಿಕೊಂಡು ನೆನಪಿನಲ್ಲಿ ಉಳಿಸಿಕೊಳ್ಳುತ್ತಿದ್ದರು. ಆ ನೆನಪಿನ ಆಸ್ತಿಯನ್ನು ತಮ್ಮ ಮಕ್ಕಳಿಗೆ, ಅಕ್ಕಪಕ್ಕದವರಿಗೆ, ಬಂಧು ಬಾಂಧವರಿಗೆ, ರವಾನಿಸುತ್ತಿದ್ದರು. ಅಂದರೆ ಜನಪದ ಸಂಸ್ಕೃತಿ ಜನರಿಂದ ಜನರಿಗೆ, ತಲೆಮಾರಿನಿಂದ ತಲೆಮಾರಿಗೆ, ನೆನಪಿನಿಂದ ನೆನಪಿಗೆ ಸಾಗುತ್ತಿತ್ತು. ಈ ನೆನಪಿನ ನಿಧಿಯೇ ಜಾನಪದ. ಜಾನಪದವು ಮಾನವ ಜೀವನದ ರೀತಿ–ನೀತಿ, ಆಚಾರ–ವಿಚಾರ, ಸಂಪ್ರದಾಯ, ನಂಬಿಕೆಗಳನ್ನು ಗ್ರಹಿಸಿ ವಿಶ್ಲೇಷಿಸುವ ಮೂಲಕ ನಮ್ಮ ದೇಶೀಯ ಜ್ಞಾನ ಪರಂಪರೆಯ ಶೋಧ ಮತ್ತು ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸುವ ನಿಟ್ಟಿನಲ್ಲಿ ಇದರ ಅಧ್ಯಯನಕ್ಕೆ ಮಹತ್ವದ ಸ್ಥಾನವಿದೆ. ಹಾಗಾದರೆ ಕಥನ ಕಾವ್ಯ ಎಂದರೇನು?, ಕಥನ ಕಾವ್ಯಗಳು ಎಂದು ಯಾವುದನ್ನು ಗುರುತಿಸಿಕೊಳ್ಳುತ್ತೇವೆ ಎಂದು ಈ ಕೆಳಕಂಡಂತೆ ನೋಡಬಹುದಾಗಿದೆ.

ಕಥನ ಕಾವ್ಯ ಎಂದರೆ ''ಬಹು ಸಂಕೀರ್ಣವಾದ, ವರ್ಗೀಕರಣಕ್ಕೆ ಸುಲಭವಾಗಿ ಸಗ್ಗದ ವೈವಿಧ್ಯತೆಯ ವೈಭವದಿಂದ ಬೆರಗುಗೊಳಿಸುವ ಪ್ರಕಾರ. ಅರ್ಧಗಂಟೆಯಲ್ಲಿ ಹಾಡಬಹುದಾದ ಪದಗಳಿಂದ ಹಿಡಿದು ರಾತ್ರಿ, ಒಂದು ರಾತ್ರಿ, ಒಂದು ರಾತ್ರಿ ಏಕೆ ಅನೇಕ ರಾತ್ರಿಗಳ ತನಕ ಹಾಡುವಷ್ಟು ಪದಗಳು ಅದರ ಬಸಿರಲ್ಲಿ ಹುದುಗಿವೆ. ವಸ್ತು ವೈವಿಧ್ಯ ನೋಡಿದರೆ ಅದರದೇ ಒಂದು ವಿಶ್ವವಾಗುತ್ತದೆ. ಪುರಾಣ, ಇತಿಹಾಸ, ಯುದ್ಧ, ಸಾಹಸಕಾರ್ಯ, ದೇವ ಮಾನವ ಸಂಸಾರ, ಸಾಮಾಜಿಕ ಜೀವನ, ಅಮಾನುಷ ಘಟನೆಗಳು, ಸಾಧು ಸಂತರ, ವೀರರ ಜೀವನ, ವಿನೋದ ಸಂಗತಿಗಳು, ಐತಿಹ್ಯ, ದಂತ ಕಥೆ, ತತ್ವ ವಿಚಾರ, ನೀತಿ, ಸ್ವಾತಂತ್ರ್ಯ ಚಳುವಳಿ, ದೇಶಾಭಿಮಾನಿಗಳ ತ್ಯಾಗ, ಪ್ರಾಣಿ ಕಥೆ, ಹೀಗೆ ಒಂದೇ, ಎರಡೇ ಸರ್ವ ಜಗದ್ವಸ್ತುಗಳು ಹಾಗೂ ವ್ಯಾಪಾರಗಳು ಅದಕ್ಕೆ ಗ್ರಾಸವಾಗುತ್ತವೆ''(ದೇ.ಜ.ಗೌ, ಪುಟ–133), ಎಂದು ಕಥನ ಕಾವ್ಯದ ಕುರಿತು ವ್ಯಾಖ್ಯಾನಿಸಿದ್ದಾರೆ. ಹಾಗಾಗಿ ಇಲ್ಲಿ ಕಥೆಯೇ ಪ್ರಧಾನವಾಗಿದ್ದು ಆ ಇಡೀ ಕಥೆಯನ್ನು ಹಾಡಿನ ರೂಪದಲ್ಲಿ ಹೇಳುವುದಕ್ಕೆ ಅಥವಾ ಹಾಡಿನಲ್ಲಿ ಹೇಳಲಾದ ಕಥೆಯನ್ನು ಕಥನ ಕಾವ್ಯ ಎಂದು ಕರೆಯುತ್ತಾರೆ. ಹಾಗೆಯೇ ನಾನೇ ಖುದ್ದಾಗಿ ಕ್ಷೇತ್ರಕಾರ್ಯವನ್ನು ಮಾಡಿ, ಮಹಿಳೆಯರಿಂದ ಸಂಗ್ರಹಿಸಿದ ಕಥನ ಕಾವ್ಯಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಿದ್ದೇನೆ. ಆ ರೀತಿಯ ಕಥನ ಕಾವ್ಯಗಳು ಈ ಮುಂದಿನಂತಿವೆ.

ಕಥನ ಕಾವ್ಯಗಳಾಗಿ ''ಕೆರೆ ಹೊನ್ನಮ್ಮ'', ''ಬಂಜೆ ಮಾದೇವಿ'', ''ಗುಣಸಾಗರಿ'', ''ನೀಲಕಂಠ'', ''ಕೆರೆಗೆ ಹಾರ'', ''ಕೆರೆ ಕಟ್ಟ ಕೆಂಭಯ್ಯಗೌಡ'', ಇನ್ನು ಮುಂತಾದ ಕಥನ ಕಾವ್ಯಗಳನ್ನು ಈ ಲೇಖನದಲ್ಲಿ ವಿಶ್ಲೇಷಣೆಗೊಳಪಡಿಸಲಾಗಿದೆ. ಜನಪದ ಸ್ತ್ರೀಯು ತನ್ನ ನಿತ್ಯದ ಬದುಕಿನಲ್ಲಿ ತನ್ನೊಳಗಿನ ನೋವನ್ನು ತೋರ್ಪಡಿಸಲಿಕ್ಕಾಗದೆ, ಮೌನವಹಿಸಿ ವಾಸ್ತವದ ಬದುಕಿನಲ್ಲಿ ನರಳಿದ್ದಾಳೆ, ಆ ಮೌನಕ್ಕೆ ವಿರಾಮವಿತ್ತು, ಆ ನೋವಿಗೆ ಹಾಡಿನ ರೂಪ ಕೊಟ್ಟು ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುತ್ತಾಳೆ. ಹೀಗೆ ಜನಪದ ಮಹಿಳೆಯರು ತಮ್ಮ ಜೀವನದ ಸುಖ–ದುಃಖ, ನೋವು– ನಲಿವುಗಳನ್ನು, ಹಾಡುವುದರ ಮುಖಾಂತರ ತೋರ್ಪಡಿಸಿಕೊಳ್ಳುತ್ತಿದ್ದರು. ಈ ಹಾಡುಗಳಲ್ಲಿ ಅಂದಿನ ಜನಪದ ಸ್ತ್ರೀಯ ಕಷ್ಟ ಪರಂಪರೆಯನ್ನು, ಇಡೀ ಸ್ತ್ರೀ ಸಮುದಾಯದ ಸ್ಥಿತ್ಯಂತರದ ನೆಲೆಯನ್ನು ಕಟ್ಟಿ ಕೊಟ್ಟಿರುವುದನ್ನು ಈ ಕಥನ ಕಾವ್ಯಗಳು ಪ್ರತಿಬಿಂಬಿಸುತ್ತವೆ. ಹಾಗೆಯೇ ಆ ಕಷ್ಟದಿಂದ ಮಹಿಳೆಯರು ಪಾರಾಗುವ ನೆಲೆಯನ್ನು ಕೆಲವು ಕಥನ ಕಾವ್ಯಗಳು ಚಿತ್ರಿಸಿದರೆ, ಇನ್ನು ಕೆಲವು ಕಥನ ಕಾವ್ಯಗಳಲ್ಲಿ ಪುರುಷ ಪ್ರಧಾನ ವ್ಯವಸ್ಥೆಯು ರೂಪಿಸಿದ ಮೌಲ್ಯಗಳಿಂದ ಹೊರಬರಲಾರದೆ ಬಲಿಯಾಗುವ ಕಥನಗಳನ್ನು ಕೂಡ ನೋಡಬಹುದಾಗಿದೆ. ಒಟ್ಟಾರೆ ಈ ಕಥನ ಕಾವ್ಯಗಳು ಸ್ತ್ರೀಯರ ಮನೋಧರ್ಮ, ನೋವಿನ ಚಿತ್ರಣ, ಆತ್ಮದ ಚಿತ್ರಣ, ತಮ್ಮದಲ್ಲದ ತಪ್ಪಿಗಾಗಿ ವಿನಾ ಕಾರಣ ದುರಂತಕ್ಕೀಡಾಗುವ ಹೆಣ್ಣಿನ ಚಿತ್ರಣವನ್ನು ಕಟ್ಟಿಕೊಡುವುದಕ್ಕೆ ಕಥನ ಕಾವ್ಯಗಳು ಒಂದು ಮುಖ್ಯ ಮೌಖಿಕ ಮಾಧ್ಯಮವಾಗಿದೆ.

ಜನಪದ ಮಹಿಳಾ ಕಥನ ಕಾವ್ಯವು ಮಹಿಳೆಯರ ಸೂಕ್ಷ್ಮಾತಿಸೂಕ್ಷ್ಮ ಸಂಗತಿಗಳ ಅರಿವಿಗೆ ಸಹಕಾರಿಯಾಗುತ್ತದೆ, ಹಾಗೆಯೇ ಹೆಣ್ಣಿನ ಜೀವನದ ಆಂತರ್ಯವನ್ನು ತೆರೆದಿಟ್ಟ ಹಾಳೆ ಈ ಕಥನ ಕಾವ್ಯಗಳು. ಮೊದಲಿಗೆ ಕೆರೆ ಹೊನ್ನಮ್ಮ ಕಥನ ಕಾವ್ಯವನ್ನು ವಿಶ್ಲೇಷಣೆಗೊಳಪಡಿಸಿದ್ದೇನೆ. 'ಕೆರೆ ಹೊನ್ನಮ್ಮ' ಕಾವ್ಯವನ್ನು ನನ್ನ ಸಂಗ್ರಹಕ್ಕೂ ಮೊದಲು ರಾಜಪ್ಪ ಟಿ.ಎಸ್, ಸಿ.ಟಿ. ಗುರುಪ್ರಸಾದ್ ಅವರು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಈ ಕಾವ್ಯವು ಮುಖ್ಯವಾಗಿ ಬಂಜೆತನದ ಧಾರುಣತೆಯನ್ನು, ಒಬ್ಬ ಹೆಣ್ಣಿನ ಅಸ್ತಿತ್ವವನ್ನೇ ನಾಶಪಡಿಸುವ ನೆಲೆಯನ್ನು ಈ ಕಾವ್ಯವು ಚರ್ಚಿಸುತ್ತದೆ. ಇಲ್ಲಿ ಹೊನ್ನಮ್ಮನಿಗೆ ಮಕ್ಕಳಿಲ್ಲ, 'ಬಂಜೆ' ಎಂಬ ಕಾರಣದಿಂದ ಅವಳು ಸಮಾಜದಲ್ಲಿ ಬಾಳಲು ಅರ್ಹಳಲ್ಲ ಎಂಬ ದೃಷ್ಟಿಯಿಂದ ಕೆರೆಗೆ ಬಲಿಯಾಗಿಸುವಂಥ ಹೃದಯವಿದ್ರಾವಕ ಘಟನೆಯನ್ನು ಈ ಕಾವ್ಯವು ತೆರೆದಿಡುತ್ತದೆ. ಕೊನೆಯಲ್ಲಿ ಹೊನ್ನಮ್ಮ ತಾನು ಕೆರೆಗೆ ಬಲಿಯಾಗುವುದಕ್ಕೆ ಕಾರಣರಾದ ಎಲ್ಲರನ್ನೂ ಅವರ ಅಣ್ಣನಿಗೆ ಹೇಳಿ ಸಾಯಿಸುತ್ತಾಳೆ. ಆ ಸಾಲುಗಳು.....

ತಳವರನ ಕಡಿಯಣ್ಣ
ತಾಳೆಮರಕ್ಕೆಳಿಯಣ್ಣ ತುಂಬಿಲಾಲಿ
ಬಾರಿಕನ ಕಡಿಯಣ್ಣ
ಬಾಜಾರಕ್ಕೆಳಿಯಣ್ಣ ತುಂಬಿಲಾಲಿ
ಮಾವಾನ ಕಡಿಯಣ್ಣ
ಮಾವಿನ ಮರಕ್ಕೆಳಿಯಣ್ಣ ತುಂಬಿಲಾಲಿ
ಅತ್ತೇನ ಕಡಿಯಣ್ಣ
ಅತ್ತಿ ಮರಕ್ಕೆಳಿಯಣ್ಣ ತುಂಬಿಲಾಲಿ
ನನ್ನೇನೆ ಗಂಡಾಗ
ಮದುವೀಯ ಮಾಡಣ್ಣ ತುಂಬಿಲಾಲಿ
ನನ್ನೇನೆ ಗಂಡಾಗ
ಮದುವೀಯ ಮಾಡಣ್ಣ ತುಂಬಿಲಾಲಿ
(ಹಾಡಿದವರು–ಹನುಮಕ್ಕ ಮತ್ತು ಸಂಗಡಿಗರು, ಕಮಲಾಪುರ, ಬಳ್ಳಾರಿ)

ಹೀಗೆ ಹೇಳಿ ಕೆರೆಗೆ ಬಲಿಯಾಗುವಂತ್ತದ್ದನ್ನು ಕಾಣಬಹುದು. ಈ ನಿಕೃಷ್ಟ ಸಮಾಜವು ಬಂಜೆಯಾದವಳನ್ನು ಮಾತ್ರ ದೋಷಿ ಎಂದು ಹೇಳುತ್ತದೆಯೇ ಹೊರತು, ಪುರುಷನ ನಿರ್ವೀಯತೆ ಕುರಿತು ಎಲ್ಲೂ ಪ್ರಸ್ತಾಪವೇ ಆಗಿಲ್ಲ, ಅದಕ್ಕೂ ಅವನಿಗೂ ಸಂಬಂಧವೇ ಇಲ್ಲವೆನ್ನುವಂತೆ ನಿರ್ಲಿಪ್ತನಾಗಿದ್ದಾನೆ. ಆತನು ಕೂಡ ಕಾರಣ ಕರ್ತ ಎಂದು ಸಮಾಜ ಚಿಂತಿಸದೇ ಹೆಣ್ಣನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಅವಳ ಅಸ್ತಿತ್ವವನ್ನೇ ಇಲ್ಲವಾಗಿಸುತ್ತದೆ ಎಂಬುದನ್ನು ಈ ಕಥನ ಕಾವ್ಯಗಳು ಬಹಿರಂಗಪಡಿಸುತ್ತವೆ.

'ಬಂಜೆ ಮಾದೇವಿ' ಕಥನದಲ್ಲಿ ಹೆಸರೇ ಸೂಚಿಸುವ ಹಾಗೆ ಬಂಜೆಯ ಕುರಿತಂತೆ ವಸ್ತುವನ್ನಾದರಿಸಿರುವಂತ್ತದ್ದು. ಇಲ್ಲಿ ಮಾದೇವಿಯು ಕುಟ್ಟುವವರ ಮನೆಗೆ,ಬೀಸುವವರ ಮನೆಗೆ ಹೋದಾಗ ಅಲ್ಲಿ ಅವಳನ್ನು ಗೊಡ್ಡೆಂದು ಕರೆದು ಹೀಯಾಳಿಸುತ್ತಾರೆ. ತಾನು ಬಂಜೆಯಾದ ಕಾರಣಕ್ಕೆ ಅವಮಾನಿತಳಾದ ಹೆಣ್ಣು, ಕೊನೆಗೆ ಅಲೌಕಿಕ ಶಕ್ತಿಯ ಮೊರೆ ಹೋಗಿ ಸಂತಾನವನ್ನು ಬೇಡುವುದು ಜನಪದರಲ್ಲಿ ಸರ್ವೇಸಾಮಾನ್ಯ ವಿಷಯವಾಗಿದೆ. ಸಂತಾನವನ್ನು ಬೇಡುವ ಸಂದರ್ಭದಲ್ಲಿ ಅವರ ಪೂರ್ವಾಪೇಕ್ಷೆಯು ಪುರುಷ ಸಂತಾನವನ್ನು ಬೇಡುವುದೇ ಆಗಿದೆ. "ಕುರುಡಾರ ನಾ ವಲ್ಲ, ಕುಂಟಾರ ನಾವಲ್ಲ, ರಘು ರಾಮನಂಬ ಮಗ ಕೊಡು ಕೋಲೆ" (ನಾಗಮ್ಮ ಮತ್ತು ಸಂಗಡಿಗರು–ಬೀದರ್ ಜಿಲ್ಲೆ) ಅವರ ಪೂರ್ವಾಪೇಕ್ಷೆಯ ಹಿಂದೆ ಪುರುಷ ಪ್ರಧಾನವ್ಯವಸ್ಥೆಯ ಮನಸ್ಸು ಇರುವುದು ಗೋಚರವಾಗುತ್ತದೆ. ಹಾಗಾಗಿ ಆಕೆ ಬಂಜೆತನದಿಂದ ಮುಕ್ತಿಯನ್ನು ಪಡೆಯಬೇಕು ಅಂದರೆ ಯಾವುದಾದರು ಒಂದು ಮಗುವಾದರೆ ಸಾಕು ಎಂಬ ನಿಲುವಿಲ್ಲದೇ, ಗಂಡು ಮಗುವಿನ ಅಪೇಕ್ಷೆಯೇ ಇರುವುದನ್ನು ಈ ಕಾವ್ಯವು ಧ್ವನಿಸುತ್ತದೆ. ಇದನ್ನ ನೋಡಿದರೆ ಅಂದಿನ ಸಮಾಜವು ಬಂಜೆಯಾದವಳು ಗಂಡು ಸಂತಾನವನ್ನು ಕೊಟ್ಟರೆ ಮಾತ್ರ ಅವಳು ಅದರಿಂದ ಮುಕ್ತಿಗೊಳ್ಳಲು ಸಾಧ್ಯ ಎಂದು ಆ ಅಪೇಕ್ಷಿತ ಮನಸ್ಸುಗಳ ಹಿಂದಿನ ನಿಲುವನ್ನು ಈ ಸಾಲಿನ ಮುಖಾಂತರ ಊಹಿಸಬಹುದಾಗಿದೆ.

'ಗುಣಸಾಗರಿ'ಕಥನ ಕಾವ್ಯವು ಪಾತಿವ್ರತ್ಯದ ಪರಿಕಲ್ಪನೆ ಕುರಿತಂತೆ ಬೆಳಕನ್ನು ಚೆಲ್ಲುತ್ತದೆ. ಇಲ್ಲಿ ಪುರುಷ ಪ್ರಧಾನ ವ್ಯವಸ್ಥೆಯು ರೂಪಿಸಿದ ಮೌಲ್ಯಗಳನ್ನು ಗಟ್ಟಿಗೊಳಿಸುತ್ತಾ ಹೋಗುವುದನ್ನು ಇಡೀ ಕಥಾ ಹಂದರದ ಬೆಳವಣಿಗೆಯಲ್ಲಿ ನೋಡಬಹುದು. ಇಲ್ಲಿ ಗುಣಸಾಗರಿಯನ್ನು ಮದುವೆಯಾದ ಸಂಪನ್ನನು ಮುತ್ತಿನ ವ್ಯಾಪಾರಕ್ಕೆಂದು ಹೋಗುತ್ತಾನೆ, ಅವನು ಹೋದ ಮೇಲೆ ಪತ್ನಿ ಋತುಮತಿಯಾದ ವಿಷಯವನ್ನು ಗೀಜುಗ ಪಕ್ಷಿಗಳ ಸಂಭಾಷಣೆಯಿಂದ ತಿಳಿದ ಸಂಪನ್ನನು ಆಗಿಂದಾಗಲೇ ಪತ್ನಿಯನ್ನು ಕಾಣಲೆಂದು ಹೊರಡುತ್ತಾನೆ. ಸಂಪನ್ನ ಮನೆಗೆ ಬಂದು ಹೋಗುವ ವಿಷಯ ಮನೆಯಲ್ಲಿ ಯಾರಿಗೂ ಗೊತ್ತಾಗದ ಕಾರಣ ತಾನು ಬಂದ ಗುರುತಿಗೆ ಉಂಗುರವನ್ನು ಕೊಟ್ಟು ಹೊರಡುತ್ತಾನೆ. ಅವನು ಹೋದ ನಂತರ ಗರ್ಭಿಣಿಯಾದ ಗುಣಸಾಗರಿಯ ವಿಷಯ ಇಡೀ ಊರಿಗೆ ಹಬ್ಬಿ ನಾದಿನಿ–ಮೈದುನರೆಲ್ಲರಿಂದಲೂ ಮಾತಿನ ತುಳಿತಕ್ಕೆ ಒಳಗಾಗುತ್ತಾಳೆ. ಎಲ್ಲರೂ ಅವಳನ್ನು ಕದ್ದು ಗರ್ಭಿಣಿಯಾಗಿದ್ದೀಯಾ ಎಂದು ಚುಚ್ಚು ಮಾತುಗಳನ್ನಾಡಿ ಇಡೀ ಊರಿನಿಂದಲೇ ದೂರ ಮಾಡಿ ಕಾಡಿಗಟ್ಟುತ್ತಾರೆ. ಆ ಪೂರ್ವದಲ್ಲಿ ಉಂಗುರವು ಕೂಡ ಮಾಯವಾಗುವುದನ್ನು ಕಾಣಬಹುದು, ಕಾಡಿನಲ್ಲಿ ಕಡುಕಷ್ಟವನ್ನು ಅನುಭವಿಸಿದ ಗುಣಸಾಗರಿಯು ಹನ್ನೆರಡು ವರುಷಗಳ ನಂತರ ಪತಿಯನ್ನು ಸೇರುತ್ತಾಳೆ. ಆಗ ಮಾಯವಾದ ಉಂಗುರ ಪತಿ ಬಂದ ನಂತರ ಪ್ರತ್ಯಕ್ಷವಾಗುವುದನ್ನು ಕಾಣಬಹುದಾಗಿದೆ. ಇಲ್ಲಿ ಎಲ್ಲಿಯು ಆ ಮೌಲ್ಯಗಳಿಗೆ ದಕ್ಕೆ ಬರದಂತೆ, ಆ ಮೌಲ್ಯಗಳನ್ನು ಜನಪದ ಸ್ತ್ರೀಯರು ಒಪ್ಪಿಕೊಳ್ಳುವ ಹಾಗೆ ವ್ಯವಸ್ಥೆ ರೂಪಿಸಿರುವುದು ಗೋಚರವಾಗುತ್ತದೆ. ಅಂದರೆ ಮಹಾನ್ ಪತೀವ್ರತೆ ಎಂದು ಸಾಬೀತುಪಡಿಸಬೇಕು ಅಂದರೆ ಪ್ರಧಾನ ವ್ಯವಸ್ಥೆಯು ರೂಪಿಸಿದ ಪರೀಕ್ಷೆಗಳಲ್ಲಿ ಯಶಸ್ವಿಯಾದರೆ ಮಾತ್ರ ಆಕೆ ಮಹಾನ್ ಪತೀವ್ರತೆ ಎಂದು ಕರೆಸಿಕೊಳ್ಳಲು ಅರ್ಹಳು ಎಂಬುದನ್ನು ಈ ಕಥನ ಕಾವ್ಯವು ಚಿತ್ರಿಸುತ್ತದೆ. ಹಾಗಾಗಿ ಇಲ್ಲಿ ಗುಣಸಾಗರಿಯು ಆ ಪೂರ್ವದಲ್ಲಿ ಪತೀವ್ರತೆ ಎಂದು ಸಾರುವ ನೆಲೆಯಲ್ಲಿ ಗುಣಸಾಗರಿ ಅನುಭವಿಸಿದ ಅರಣ್ಯರೋಧನವನ್ನು ಹೃದಯಸ್ಪರ್ಶಿಯಾಗಿ ಕಟ್ಟಿಕೊಡುತ್ತದೆ. ಇಡೀ ಕಥನ ಕಾವ್ಯವು ಗುಣಸಾಗರಿಯ ಮೂಲಕ ಹೆಣ್ಣೊಬ್ಬಳ ನೋವು, ತುಡಿತ, ಆಸೆ–ಆಕಾಂಕ್ಷೆಗಳು ಅರಣ್ಯರೋದನವಾಗಿರುವುದನ್ನು ತೆರೆದಿಡುತ್ತದೆ. ಇನ್ನು ನೀಲಕಂಠ ಕಥನ ಕಾವ್ಯದ ಪಾತ್ರಗಳಲ್ಲಿ ಸ್ವಲ್ಪ ವ್ಯತ್ಯಾಸ ಕಂಡರೂ, ಗುಣಸಾಗರಿ ಕಥನ ಕಾವ್ಯದ ವಸ್ತುವನ್ನೇ ಆಧರಿಸಿರುವಂತ್ತದ್ದು ಆಗಿದೆ.

"ಕರೆಗೆ ಹಾರ", "ಕೆರೆ ಕಟ್ಟ ಕೆಂಭಯ್ಯ ಗೌಡ" , ಇವೆರಡರ ವಸ್ತು ಒಂದೇ ರೀತಿಯಾಗಿದ್ದು ಇದರಲ್ಲಿಯೂ ಪಾತ್ರಗಳಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಬದಲಾಗಿರುವುದನ್ನು ಕಾಣಬಹುದಾಗಿದೆ. ಕೃಷಿಯನ್ನೇ ಆಶ್ರಯಿಸಿದ ಜನಪದರಿಗೆ ಸರಿಯಾಗಿ ಮಳೆಬಾರದಿದ್ದ ಸಂದರ್ಭದಲ್ಲಿ ಕೆರೆಯ ನೀರು ಆಧಾರವಾಗುತ್ತಿತ್ತು. ಊರಿನ ಗೌಡನು ಹಳ್ಳಿಯ ಸಮಷ್ಟಿ ಹಿತವನ್ನು ಕಾಪಾಡುವ ಉದ್ದೇಶದಿಂದ ಕೆರೆಯನ್ನು ಕಟ್ಟಿಸುತ್ತಿದ್ದನು. ಕೆರೆಯನ್ನು ಕಟ್ಟಿಸಿದ್ದರೂ ನೀರು ಬಾರದಿದ್ದ ಸಂದರ್ಭದಲ್ಲಿ ಪಂಚಾಂಗದ ನಿರ್ಣಯದಿಂದ ಬಲಿ ಕೊಡುವ ಸಂಪ್ರಧಾಯ ಬೆಳೆದು ಬಂದಿತು. ಹಾಗಾಗಿ ಕೆರೆ ಕಟ್ಟಿಸಲು, ಕೆರೆ ದುರಸ್ಥಿ ಮಾಡಿಸಲು, ಕೋಟೆ ಕಟ್ಟಲು, ಬಲಿಯನ್ನು ಕೊಡುವುದು ವಿಶಿಷ್ಟ ಸ್ಥಾನ ಪಡೆಯಿತು. ಅದರಲ್ಲಿಯೂ ಕೆರೆಗೆ ಬಲಿ ಕೊಡುವುದಕ್ಕೆ ಹೆಣ್ಣನ್ನೇ ಅಂದರೆ ಬಂಜೆಯಾದವಳನ್ನು ಅಥವಾ ಕಿರಿ ಸೊಸೆಯನ್ನ ಅಥವಾ ಬಾಣಂತಿಯನ್ನು, ಅದರಲ್ಲಿಯೂ ಗಂಡನ ಅನುಪಸ್ಥಿತಿಯಲ್ಲಿ ಆಯ್ಕೆ ಮಾಡಿಕೊಂಡು ಬಲಿ ಕೊಡುತ್ತಿದ್ದದ್ದು ಶೋಚನೀಯ ಸ್ಥಿತಿಯಾಗಿದೆ. ಈ ನೆಲೆಯನ್ನು ಗಮನಿಸಿದರೆ ಪತಿ ಇಲ್ಲದೇ ಹೆಣ್ಣಿಗೆ ಅಸ್ತಿತ್ವವಿಲ್ಲ ಎಂಬ ನಿಲುವು ಪುರುಷ ಪ್ರಧಾನತೆಯ ಇನ್ನೊಂದು ಚಹರೆಯನ್ನು ಗಮನಿಸಬಹುದಾಗಿದೆ.

'ಕೆರೆಗೆ ಹಾರ'ದಲ್ಲಿ ಮಾಲೇಗೌಡರು ಊರಿನಲ್ಲಿ ಕೆರೆಯನ್ನು ಕಟ್ಟಿಸಿದ್ದಾರೆ, ಆದರೆ ನೀರಿಲ್ಲ ಆಗ ಪಂಚಾಂಗ ಕೇಳಿದಾಗ ಹಿರಿ ಸೊಸೆಯನ್ನು ಬಲಿ ಕೊಡಬೇಕು ಎಂದು ಹೇಳಿದಾಗ, ಹಿರಿ ಸೊಸೆ ಕೊಟ್ಟರೆ ಹಿರಿತನಕ್ಕೆ ಯಾರಿಲ್ಲ ಎಂದು ಕಿರಿ ಸೊಸೆ ಭಾಗೀರಥಿಯನ್ನು ಕೊಡಲು ಒಪ್ಪಿಗೆಯನ್ನು ಸೂಚಿಸುತ್ತಾನೆ.

ಮಾಲೇ ಗೌಡರು ತಮ್ಮ ಸೊಸೆ ಭಾಗೀರಥಿಯ ಹತ್ತಿರ ಈ ರೀತಿ ಹೇಳುತ್ತಾರೆ.

ಅಲ್ಲಿಂದ ಮಾಲೇಗೌಡ ಏನಂತ ಹೇಳುತ್ತಾರ
ಒಂದಾ ಇಚ್ಚೆ ಏರಾ
ಕೆರೆಯ ಬೇಡಿತ್ತವ್ವಾ ನಿನಗೆ ಹಾರ
ಕೆರೆಯ ಬೇಡಿತ್ತವ್ವಾ ನಿನಗೆ ಹಾರ
ಆಗ ಭಾಗೀರಥಿಯು
ಆವಾಗ ಭಾಗೀರಥಿ ಏನಂತ ಹೇಳುತ್ತಾಳ
ಒಂದಾ ಇಚ್ಚೆ ಏರಾ
ನನ್ನ ಜೀವಾ ಹೋದಾರ್ ಹೋಗಲಿ ಬಾರ
ನನ್ನ ಜೀವಾ ಹೋದಾರ್ ಹೋಗಲಿ ಬಾರ
ಮುಂದಿನವರಿಗೆ ಆಯಿತಾದೆ ಉದ್ದಾರ
(ಹಾಡಿದವರು–ನಾಗಮ್ಮ ಮತ್ತು ಸಂಗಡಿಗರು, ಬೀದರ್ ಜಿಲ್ಲೆ)

ಇಲ್ಲಿ ಭಾಗೀರಥಿಯು ತಮ್ಮ ಮಾವನ ಮಾತಿಗೆ ಪ್ರತಿಭಟಿಸದೇ ನನ್ನ ಜೀವ ಹೋದರೆ ಹೋಗಲಿ ಮುಂದಿನವರಿಗೆ ಅಂದರೆ ಸಮಷ್ಟಿಯ ಹಿತಕ್ಕಾಗಿ, ಊರಿನವರ ಶ್ರೇಯಸ್ಸಿಗೆ ಅವಳು ಒಪ್ಪಿಕೊಳ್ಳುತ್ತಾಳೆ. ಭಾಗೀರಥಿಯು ತನ್ನ ತಂದೆ ತಾಯಿ ಹತ್ತಿರ ಹಾರವಾಗುವುದರ ವಿಷಯವನ್ನು ಹೇಳಿಕೊಳ್ಳುವುದಕ್ಕಾಗದೇ, ತನ್ನ ಗೆಳತಿ ಹತ್ತಿರ ಮಾತ್ರ ಸತ್ಯವನ್ನು ಹೇಳುತ್ತಾಳೆ. ಇಲ್ಲಿ ಈ ಅಂಶವನ್ನು ಗಮನಿಸಿದರೆ ಅವಳಿಗೆ ಹಾರವಾಗುವುದಕ್ಕೆ ಇಷ್ಟವಿಲ್ಲ,ಸಮಾಜದ ಕೇಂದ್ರ ಬಿಂಧುವಾದ ಮಾವನ ಒತ್ತಡಕ್ಕೆ ಮಣಿದು ಒಲ್ಲದ ಮನಸ್ಸಿನಿಂದ ಒಪ್ಪಿಗೆಯನ್ನು ಸೂಚಿಸಿ ಕೆರೆಗೆ ಹಾರವಾಗುತ್ತಾಳೆ. ಈ ಸ್ವಾರ್ಥ ಪುರುಷಪ್ರಧಾನ ವ್ಯವಸ್ಥೆಯಲ್ಲಿ ಭಾಗೀರಥಿಯನ್ನು ಇರಗೊಡದ ಸಮಾಜವು, ಅದೇ ವ್ಯವಸ್ಥೆಯಲ್ಲಿ ತದ್ವಿರುದ್ದವಾಗಿ ಇದ್ದ ಭಾಗೀರಥಿಯ ಪತಿಯು ಕೂಡ ಪತ್ನಿ ಹಾರವಾದ ವಿಷಯವನ್ನು ತಿಳಿದು ಆರು ಸಾವಿರ ಕೊಟ್ಟರೂ ಸಿಗಲಾರದಂಥ ಸತಿ ನೀನು ಎಂದು ಹೇಳಿ ಅವನು ಕೆರೆಗೆ ಧುಮುಕುವುದನ್ನು ನಾವು ಕಾಣಬಹುದು. ಹಾಗಾಗಿ ಭಾಗೀರಥಿಯ ಪತಿ ನಮಗೆ ಇಲ್ಲಿ ವಿಶಿಷ್ಟವಾಗಿ ಕಾಣುತ್ತಾರೆ.

ಈ ಮೇಲ್ಕಂಡ ಎಲ್ಲಾ ಮೌಖಿಕ ಆಕರಗಳಾದ ಕಥನ ಕಾವ್ಯಗಳು ಹೆಣ್ಣಿನ ನೋವನ್ನು ಲೋಕಕ್ಕೆ ತೆರೆಯುತ್ತಾ, ಪುರುಷ ಪ್ರಧಾನ ವ್ಯವಸ್ಥೆಯ ಧಾರುಣತೆಯನ್ನು ಎತ್ತಿ ಹಿಡಿಯುವಲ್ಲಿ ಮುನ್ನೆಲೆಗೆ ಬರುತ್ತವೆ. ಹಾಗೆಯೇ ಒಬ್ಬ ಹೆಣ್ಣಿನ ನೋವನ್ನು ಇನ್ನೊಬ್ಬ ಹೆಣ್ಣು ಅರ್ಥಮಾಡಿಕೊಂಡು ಅನಾಮಿಕೆಯಾಗಬೇಕಿದ್ದ ಅವಳ ಬಲಿದಾನವನ್ನು ಕಥನ ಕಾವ್ಯದ ಮೂಲಕ ಶಾಶ್ವತಗೊಳಿಸುವ ಪ್ರಯತ್ನವನ್ನು ಜನಪದ ಸ್ತ್ರೀಯರು ಮಾಡಿದ್ದಾರೆ. ಜನಪದ ಸ್ತ್ರೀಯರು ಯಾರಿಗೆ ಹೇಳುತ್ತಿದ್ದಾರೆ, ಕೇಳುಗರು ಯಾರು ಎಂದು ನೋಡಿದಾಗ, ಇಡೀ ಸಮಾಜಕ್ಕೆ ಹೆಣ್ಣಿನ ಮೇಲೆ ಆದ ದೌರ್ಜನ್ಯಗಳನ್ನು ಈ ಹಾಡುಗಳ ಮುಖಾಂತರ ಬಿತ್ತರಿಸುತ್ತಿದ್ದಾರೆ. ಹೀಗೆ ಶೋಷಣೆಗೆ ಒಳಗಾದ ಹೆಣ್ಣು , ಶೋಷಿತ ಹೆಣ್ಣಿನ ಕಥನವನ್ನೇ ಹೇಳುವಂತ್ತದ್ದು ಆಗಿದೆ. ಹಾಗಾಗಿ ಇಂದು ಈ ಮಹಿಳೆಯರು ಹಾಡುವ ಕಥನ ಕಾವ್ಯಗಳಿಂದ ಹೆಣ್ಣು ಅನನ್ಯತೆಯನ್ನು ಕಾಯ್ದುಕೊಳ್ಳುವ ಬಗೆ, ಅವಳ ಅಂತರಾಳದ ದುಃಖ, ಅವಳ ಮೌನದ ಪ್ರತಿಭಟನೆ, ಅಂದಿನ ಸಮಾಜವು ಹೆಣ್ಣನ್ನು ನಡೆಸಿಕೊಂಡ ಬಗೆ ಇವೆಲ್ಲವನ್ನು ಅರಿತುಕೊಳ್ಳುವುದಕ್ಕೆ ಕಥನ ಕಾವ್ಯಗಳು ಇಂದು ಸಹಾಯಕವಾಗುತ್ತವೆ.

**ಪರಾಮರ್ಶನ ಗ್ರಂಥಗಳು**

1. ದೇ.ಜ.ಗೌ, ಜಾನಪದ ಅಧ್ಯಯನ, ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು
2. ರಾಮಚಂದ್ರೇಗೌಡ ಹಿ.ಶಿ. 1998, ಜಾನಪದ; ಸಾಂಸ್ಕೃತಿಕ ಆಯಾಮಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.